ಇಷ್ಟು ಮಾತ್ರ ಹೇಳಬಲ್ಲೆ. ಏಕೆಂದರೆ, ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲಿ ಇಲ್ಲ. ಅವರು ವಿಶೇಷವಾಗಿ ಆಯೋಗದ ವರದಿಯ ಚರ್ಚೆ, ಆಯೋಗದ ವರದಿಯ ಚರ್ಚೆ ಎಂದು ಹೇಳುತ್ತಿದ್ದರು. ನಾವು ಆಯೋಗದ ವರದಿಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗಲೇ ಇಲ್ಲ. ವಾಸ್ತವಿಕವಾಗಿ ಆಯೋಗದ ವರದಿಯಲ್ಲಿ ಕಂಡುಬಂದಂತಹ ಅನೇಕ ಅಂಶಗಳಲ್ಲಿ ಕೆಲವೊಂದು ಮಾತ್ರ ಈ ಚರ್ಚೆಗೆ ಉಪಯೋಗಿಸಿ ಕೊಂಡಿದ್ದೇನೆಯೇ ವಿನಹ ಬಹು ಭಾಗವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಹೋಗಲೇ ಇಲ್ಲ. ಏನಿದ್ದರೂ ಎಲ್ಲಾ ದಾಖಲೆಗಳ ಮುಖಾಂತರ ಕಂಡುಬಂದಂತಹ ಅಂಶಗಳ ಆಧಾರದ ಮೇಲೆ ಇವ್ಹೊತ್ತು ನಾವು ಚರ್ಚೆ ಮಾಡಿದ್ದರಿಂದ ಮಾನ್ಯ ಅಧ್ಯಕ್ಷರು ನಮಗೆ ಏನು ಒಂದು ರೂಲಿಂಗ್ ಕೊಟ್ಟಿದ್ದಾರೆ; ಯಾವ ಪ್ಯಾರಾಮೀಟರ್‌ನಲ್ಲಿ ನಾವು ಚರ್ಚೆ ಮಾಡಬೇಕು ಎಂದು ಹೇಳಿದ್ದಾರೆ. ಆ ಪ್ಯಾರಾಮೀಟರ್‌ನ ಒಳಗಡೆಯೇ ನಾವು ಚರ್ಚೆ ಮಾಡಿದ್ದೇವೆ. ಇದರಜೊತೆಯಲ್ಲಿ ಇವತ್ತು ಈ ಆಯೋಗದ ವರದಿ ಮೇಲೆ ನಾವು ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ. ಈಗ ನಾವು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಆಯೋಗದಲ್ಲಿ ಕಂಡುಬಂದಂಥ ಕೆಲವು ಮೆಟೀರಿಯಲ್ಸ್, ಫ್ಯಾಕ್ಟ್‌ನ್ನು ಮಾತ್ರ ಉಪಯೋಗಿಸಿಕೊಂಡು ಈ ಚರ್ಚೆಗೆ ಸಹಾಯಕವಾಗುವ ರೀತಿಯಲ್ಲಿ ಅದನ್ನು ಸದುಪಯೋಗ ಪಡಿಸಿಕೊಂಡಿದ್ದೇವೆ. ಒಟ್ಟಿನಲ್ಲಿ ನಾನು ಸರ್ಕಾರಕ್ಕೆ ಒತ್ತಾಯಪಡಿಸುವುದು ಏನೆಂದರೆ, ಇವತ್ತು ನಮ್ಮ ಮೇಲೆ ಬಹಳ ದೊಡ್ಡ ಜವಬ್ದಾರಿ ಇದೆ. ಏಕೆಂದರೆ, ನಮ್ಮ ಪಕ್ಷದ ಮೇಲೆ ನಮ್ಮ ಸರ್ಕಾರದ ಮೇಲೆ ಕೇಂದ್ರಸರ್ಕಾರದ ಮೇಲೆ ಪ್ರಬಲವಾದಂಥ ಆಪಾದನೆಯನ್ನು ಇವತ್ತು ಬೇರೆ ಬೇರೆ ಜನರು ಮಾಡುತ್ತಾ ಇದ್ದಾರೆ. ಆದಕ್ಕೆ ನಾವು ಯಾರ ಮೇಲೂ ದ್ವೇಷ ಸಾಧಿಸಬೇಕು ಎಂಬ ದೃಷ್ಟಿಯಿಂದ ಹೋಗಬೇಕಾದಂಥ ಅಗತ್ಯವಿಲ್ಲ. ಏಕೆಂದರೆ, ಅಧಿಕಾರದಲ್ಲಿ ಒಬ್ಬರು ಇರುತ್ತಾರೆ, ಒಬ್ಬರು ಇರುವುದಿಲ್ಲ. ಇವತ್ತು ಅಧಿಕಾರದಲ್ಲಿದ್ದವರು ನಾಳೆ ಇರುವುದಿಲ್ಲ. ನಾಳೆ ಇದ್ದವರು ಮತ್ತೊಂದು ದಿನ ಇರುವುದಿಲ್ಲ. ಈ ಕಡೆ ಇದ್ದವರು ಆ ಕಡೆ ಹೋಗುತ್ತಾರೆ. ಆ ಕಡೆಯವರು ಈ ಕಡೆ ಬರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇದೆಲ್ಲಾ ಇರತಕ್ಕದ್ದೇ. ಹಿಂದೆ ಕೇಂದ್ರದಲ್ಲಿ ನಾವು ಅಧಿಕಾರದಲ್ಲಿದ್ದೆವು; ಈಗ ಬೇರೆಯವರು ಬಂದಿದ್ದಾರೆ. ಇಲ್ಲಿ ಬೇರೆಯವರು ಅಧಿಕಾರದಲ್ಲಿದ್ದರು, ಈಗ ನಾವು ಬಂದಿದ್ದೇವೆ. ಯಾರೇ ಅಧಿಕಾರದಲ್ಲಿರಲಿ, ಕೆಲವು ನಿಯಮಗಳಿಗೆ ಅನುಸಾರವಾಗಿ ನಡೆದುಕೊಳ್ಳತಕ್ಕಂಥ ಪ್ರವೃತ್ತಿ ಸರ್ಕಾರದ ಆಡಳಿತದಲ್ಲಿ ಬರಲೇಬೇಕು. ಆಕಾರಣಕ್ಕಾಗಿ ಈ ವರದಿಯಿಂದ ಬೆಳಕಿಗೆ ಬಂದಂಥ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಇವತ್ತು ಕಾರ್ಯಕ್ರಮ ಕೈಗೊಳ್ಳಬೇಕು. ನನಗೆ ಒಂದು ಆತಂಕ ಏನೆಂದರೆ, ಹಿಂದೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಪ್ರಾಧಿಕಾರದಲ್ಲಿ ನಡೆದಂಥ ಸಿಮೆಂಟಿನ ಹಗರಣದ ವಿಚಾರದಲ್ಲಾಗಲಿ ಕಂಟ್ರಾಕ್ಟರ್ ಹಗರಣದ ವಿಚಾರದಲ್ಲಾಗಲಿ ವರದಿಯನ್ನು ಕೊಟ್ಟಿದ್ದಾರೆ. ಇವತ್ತಿನವರೆಗೂ ಆ ಪ್ರಕರಣದ ಬಗ್ಗೆ ಯಾರೂ ಕ್ರಮ ಕೈಗೊಂಡಿದ್ದಾರೆ ಎನ್ನುವುದು ನನಗಾಗಲಿ, ಸದನಕ್ಕಾಗಲಿ, ಗೊತ್ತಿಲ್ಲ. ಇಷ್ಟೆಲ್ಲಾ ಚರ್ಚೆಮಾಡಿ ಇದೂ ಅದೇ ರೀತಿ ಆಗಬಾರದು. ಇಷ್ಟೆಲ್ಲಾ ಚರ್ಚೆಮಾಡಿ ಅರಣ್ಯರೋದನವಾಗಬಾರದು. ಏನಾದರೂ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಮುಂದೆ ಈ ರೀತಿ ಆಗದಹಾಗೆ ನೋಡಬೇಕು. ಮತ್ತೆ ಈ ಪ್ರಾಧಿಕಾರವನ್ನು ಭ್ರಷ್ಟಾಚಾರದ ವ್ಯಾಧಿಯಿಂದ ರಕ್ಷಸತಕ್ಕಂಥ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳುಮಾಡುತ್ತಾರೆ ಎನ್ನತಕ್ಕಂಥ ವಿಶ್ವಾಸದಿಂದ ಇಷ್ಟು ಮಾತನ್ನು ಹೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಉಪಾಧ್ಯಕ್ಷರು:- ಈಗ ಒಂದು ಪ್ರಕಟಣೆ ಇದೆ. ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ 1990ನೇ ಇಸವಿಯ ಕರ್ನಾಟಕ ಧನವಿನಿಯೋಗ (ನಂ.2) ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 17-7-1990ರಂದು ಅನುಮೋದಿಸಲಾಯಿತೆಂದು ತಿಳಿಸಿದೆ.